Date :15-02-2016

# ನೀರುಳ್ಳಿ ಸರಾಸರಿ ದರ 2 ವರ್ಷಗಳ ಕನಿಷ್ಠ ಮಟ್ಟಕ್ಕೆ

ನಾಶಿಕ್‌ನಲ್ಲಿ ನೀರುಳ್ಳಿ ಸರಾಸರಿ ದರ ಹಿಂದಿನ ಎರಡು ವರ್ಷಗಳ ಕನಿಷ್ಠ ಮಟ್ಟ ಕ್ವಿಂಗೆ. ರೂ.700 ಕ್ಕೆ ಇಳಿಕೆಯಾಗಿದೆಯೆನ್ನಲಾಗಿದೆ. ಹೊಸ ಬೆಳೆಯ ಬಂಪರ್ ಉತ್ಪಾದನೆಯಿಂದ ದರ ಇಳಿಕೆಯಾಗಿದೆಯೆನ್ನಲಾಗಿದೆ. ದರ ಸ್ಥಿರವಾಗುವ ವರೆಗೆ ನೀರುಳ್ಳಿ ಗುಣಮಟ್ಟ ಸ್ಥಿರತೆ ಕಾಯ್ದು ಕೊಳ್ಳಲು ರೈತರಿಗೆ ಅಸಾಧ್ಯವಾಗುತ್ತಿರುವುದರಿಂದ ಹಾಗೂ ಅಧಿಕ ಆವಕದಿಂದ ದರ ವಾರದಿಂದೀಚೆ ಇಳಿಕೆ ಕಾಣುತ್ತಿರುವುದರಿಂದ ರೈತರು ಆತಂಕಿತರಾಗಿದ್ದರೆನ್ನಲಾಗಿದೆ. ನೀರುಳ್ಳಿ ಉತ್ಪಾದನಾ ವೆಚ್ಚ ಕ್ವಿಂಗೆ ರೂ.900 ಆಗುತ್ತದೆಂದು ಲಾಸಲ್‌ಗಾನ್ ಎಪಿಎಂಸಿಯ ಚೆಯರ್‌ಮೆನ್ ಹಾಗೂ ರಾಷ್ಟ್ರ ಕೃಷಿ ಸಹಕಾರಿ ಮಾರಾಟ ಫೆಡರೇಶನ್‌ನ ಡೈರೆಕ್ಟರ್ ಆಗಿರುವ ನಾನಾ ಸಾಹೇಬ್ ಪಾಟೀಲ್ ಹೇಳಿದ್ದಾರೆನ್ನಲಾಗಿದೆ. ಬರಗಾಲದಿಂದ ರೈತರು ಕಾರ್ನ್ ಮತ್ತು ಸೋಯಾಬೀನ್ ರಾಬಿ ಬಿತ್ತನೆ ಆರಂಭವಾಗಿಲ್ಲ ಹಾಗೂ ನೀರುಳ್ಳಿ ದರ ಇಳಿಕೆಯಾಗುತ್ತಿರುವುದು ರೈತರ ಆತಂಕ ಹೆಚ್ಚಳಕ್ಕೆ ಕಾರಣವಾಗಿದೆ.